ರಾಜ್ಯದಲ್ಲಿ ಕೃಷಿ ಸಾಗುವಳಿಯ ವಿಸ್ತೀರ್ಣ

1681 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೃಷಿ ಸಾಗುವಳಿಯಾಗುತ್ತಿರುವ ಒಟ್ಟು ಕ್ಷೇತ್ರವೆಷ್ಟು? ಇದರಲ್ಲಿ ಫ್ಲೋ ಇರಿಗೇಷನ್ (ಹರಿ ನೀರಾವರಿ) ಯಿಂದ ಸಾಗುವಳಿಯಾಗುತ್ತಿರುವ ಕ್ಷೇತ್ರವೆಷ್ಟು? ಏತ ನೀರಾವರಿಯಿಂದ ಸಾಗುವಳಿಯಾಗುತ್ತಿರುವುದು ಎಷ್ಟು? ಬಾವಿಗಳಿಂದ ನೀರು ಉಣ್ಣುತ್ತಿರುವ ಕ್ಷೇತ್ರವೆಷ್ಟು? ಕೇವಲ ಮಳೆಯಾಧಾರದ ಅವಲಂಬನೆಯಾಗಿರುವ ಕ್ಷೇತ್ರವೆಷ್ಟು?

ಆ) ಹರಿ ನೀರಾವರಿ ಮತ್ತು ಏತ ನೀರಾವರಿಗಾಗಿ ಇಲ್ಲಿಯವರೆಗೆ ಮಾಡಿದ ವೆಚ್ಚವೆಷ್ಟು? ಇದು ಪ್ರತಿ ಎಕರೆಗೆ ಸರಾಸರಿ ಎಷ್ಟು?

ಇ) ಒಣ ಬೇಸಾಯದ ಅಡಿಯಲ್ಲಿ ಅಳವಡಿಸಿರುವ ಜಮೀನುಗಳಲ್ಲಿ ಮಳೆಯಿಂದಾದ ನೀರನ್ನು ಹಿಡಿದಿಡಲು ಹಾಗೂ ಮಣ್ಣನ್ನು ತಡೆಹಿಡಿಯಲು ಇಲ್ಲಿಯವರೆಗೆ ಮಾಡಿದ ವೆಚ್ಚವೆಷ್ಟು?

ಈ) ಹರಿ ನೀರಾವರಿ ಮತ್ತು ಏತ ನೀರಾವರಿಗಾಗಿ ಸರ್ಕಾರ ಮಾಡಿದ ಹಣದ ವೆಚ್ಚವೆಷ್ಟು?

ಉ) ಮಳೆಯಿಂದ ಬಿದ್ದ ನೀರನ್ನು ಅಲ್ಲಿಯೇ ಹಿಡಿಯಲು ಹಾಗೂ ಭೂ ಸವೆತ ತಡೆಯಲು ವಿವಿಧ ಯೋಜನೆಗಳಲ್ಲಿ ಈ ವರ್ಷ ಮಾಡುವ ಅಂದಾಜು ವೆಚ್ಚವೆಷ್ಟು? ಅದರಿಂದ ಲಾಭಗೊಳ್ಳುವ ಕ್ಷೇತ್ರವೆಷ್ಟು? ಈ ರೀತಿ ಅನುಕೂಲತೆಗಳನ್ನು ಪಡೆದುಕೊಂಡು ಮಳೆಯಾಶ್ರಿತ ಜಮೀನುಗಳಲ್ಲಿ ಉತ್ಪಾದನೆಯ ಹೆಚ್ಚಳ ಎಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಕೃಷಿ ಸಾಗುವಳಿಯಾಗುತ್ತಿರುವ ಒಟ್ಟು ಕ್ಷೇತ್ರವು 1,07,89,535 ಹೆಕ್ಟೇರ್ ಇದರಲ್ಲಿ ಫ್ಲೋ ಇರಿಗೇಷನ್ (ಹರಿ ನೀರಾವರಿ) ಯಿಂದ ಸಾಗುವಳಿಯಾಗುತ್ತಿರುವ ಕ್ಷೇತ್ರ 9,34,475 ಹೆಕ್ಟೇರ್‌ಗಳು. ಏತ ನೀರಾವರಿಯಿಂದ 1,34,683 ಹೆಕ್ಟೇರ್‌ಗಳು ಸಾಗುವಳಿಯಾಗುತ್ತಿದ್ದು 4,87,447 ಹೆಕ್ಟೇರ್ ಪ್ರದೇಶವು ಬಾವಿಯಿಂದ ನೀರಾವರಿಯಾಗಿದೆ. ಮಳೆಯಾಧಾರದ ಮೇಲೆ ಅವಲಂಬಿತ ಕ್ಷೇತ್ರವು 84,62,342 ಹೆಕ್ಟೇರ್‌ಗಳು.

ಆ) ನೀರಾವರಿ ಯೋಜನೆಗಳ ಮೇಲೆ ಮಾರ್ಚ್ 95ರ ಅಂತ್ಯದವರೆಗೆ ಒಟ್ಟು 5055.21 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದ್ದು ಅದರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 4463.69 ಕೋಟಿ ರೂ.ಗಳು ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ (ಮೇಲ್ಮೈಜಲ) 591.52 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಇದು ಪ್ರತಿ ಎಕರೆಗೆ ಸರಾಸರಿ ವೆಚ್ಚ 8367 ರೂ.ಗಳಾಗುತ್ತದೆ.

ಇ) ಒಣ ಬೇಸಾಯದ ಅಡಿಯಲ್ಲಿ ಇಲ್ಲಿಯವರೆಗೆ ಸುಮಾರು 38 ಲಕ್ಷ ಎಕರೆಗಳಲ್ಲಿ ಜಲಾನಯನ ಆಧಾರದ ಮೇಲೆ ಜಮೀನುಗಳಲ್ಲಿ ಮಳೆಯಿಂದ ನೀರನ್ನು ತಡೆಹಿಡಿದಿಡಲು ಮತ್ತು ಮಣ್ಣನ್ನು ತಡೆಯಲು ಇಲ್ಲಿಯವರೆಗೆ ಮಾಡಿರುವ ವೆಚ್ಚ ರೂ. 278.28 ಕೋಟಿ ಇದರಿಂದಾಗಿ ಪ್ರತಿ ಎಕರೆಗೆ ಸರಾಸರಿ ತಗಲುವ ವೆಚ್ಚ ರೂ. 723.

ಈ) ಪ್ರಶ್ನೆ 2ಕ್ಕೆ ನೀಡಲಾಗಿರುವ ಉತ್ತರದಂತೆ.

ಉ) ಮಳೆಯಿಂದ ಬಿದ್ದ ನೀರನ್ನು ಅಲ್ಲಿಯೇ ಹಿಡಿದಿಡಲು ಹಾಗೂ ಭೂ ಸವೆತ ತಡೆಯಲು ವಿವಿಧ ಜಲಾನಯನ ಯೋಜನೆಗಳಡಿಯಲ್ಲಿ ಈ ವರ್ಷ ಮಾಡುವ ಅಂದಾಜು ವೆಚ್ಚ ರೂ. 52.28 ಕೋಟಿ, ಈ ರೀತಿ ಅನುಕೂಲತೆಗಳನ್ನು ಪಡೆಯುವ ಪ್ರದೇಶ 2,24,000 ಹೆಕ್ಟೇರ್‌ಗಳಾಗುವುದು. ಇದರಿಂದಾಗಿ ಮಳೆಯಾಶ್ರಿತ ಪ್ರದೇಶದಲ್ಲಿನ ಬೆಳೆಗಳಲ್ಲಿ ಶೇ. 10 ರಿಂದ 25 ರಷ್ಟು ಉತ್ಪಾದನೆಯ ಹೆಚ್ಚಳ ಸಾಧ್ಯವೆಂದು ನಂಬಲಾಗಿದೆ.

ಕುಂದಾಪುರ ತಾಲ್ಲೂಕಿನ ಕೃಷಿ ಇಲಾಖೆಯ ಕಟ್ಟಡಗಳು

2434 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಕೃಷಿ ಇಲಾಖೆಯವರು ಕೃಷಿ ಸಹಾಯಕರ ಹಾಗೂ ಸಹಾಯಕ ಕೃಷಿ ಅಧಿಕಾರಿಯವರ ಉಪಯೋಗಕ್ಕಾಗಿ ಕಟ್ಟಿಸಿದ ಬೇರೆ ಬೇರೆ ಪಂಚಾಯಿತಿಗಳಲ್ಲಿ ಕಟ್ಟಿಸಿದ ಕಟ್ಟಡಗಳ ಸಂಖ್ಯೆ ಎಷ್ಟು, (ಸಂಪೂರ್ಣ ವಿವರ ನೀಡುವುದು).

ಆ) ಕೆಲವು ಕಡೆಗಳಲ್ಲಿ ಇಲಾಖೆಯವರು ವಾಸ್ತವ್ಯ ಇಲ್ಲದೇ ಕಿಟಕಿಗಳನ್ನು ಬಾಗಿಲುಗಳನ್ನು ಕಳಚಿಕೊಂಡು ಹೋಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಕುಂದಾಪುರ ತಾಲ್ಲೂಕಿನಲ್ಲಿ ಕೃಷಿ ಇಲಾಖೆಯಿಂದ ನಿರ್ಮಿಸಲಾದ ಕಟ್ಟಡಗಳ ವಿವರ..

1.	ಕೃಷಿ ಸಹಾಯಕರ ನಿವಾಸ	7
2.	ಸಹಾಯಕ ಕೃಷಿ ಅಧಿಕಾರ ನಿವಾಸ	3
	ಒಟ್ಟು	10

ಕೃಷಿ ಸಹಾಯಕರ ವಸತಿ ಗೃಹಗಳು

1. ಶಿರೂರು
2. ಸಿದ್ದಾಪುರ
3. ಗೋಣಿಹೊಳಿ
4. ಹಾಲಾಡಿ
5. ಕಾಲ್ತೋಡು
6. ಕಿರುಮಂಜೇಶ್ವರ
7. ಉಪ್ಪುಂಡ

ಸಹಾಯಕ ಕೃಷಿ ಅಧಿಕಾರಿಗಳ ವಸತಿ ಗೃಹಗಳು :

1. ಬಡ್ಕಲ್ ಕಟ್ಟೆ
2. ಶಂಕರನಾರಾಯಣ
3. ವಂಡ್ಸೆ